ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080 26422372 26422373 26422374 Fax:26422377

# ಎನ್.ಇ.ಪಿ – 2020 ಪೊಸಿಷನ್ ಪೇಪರ್ ಸಿದ್ಧತಾ ತಂಡದ ಸಮಿತಿಗಳಿಗೆ ಅಭಿನಂದನಾ ಸಮಾರಂಭದ ವರದಿ

ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು, ಇವರ ಸಹಯೋಗದಲ್ಲಿ ಎನ್.ಇ.ಪಿ – 2020 ಪೊಸಿಷನ್ ಪೇಪರ್ ಸಿದ್ಧತಾ ತಂಡದ ಸಮಿತಿಗಳಿಗೆ ಅಭಿನಂದನಾ ಸಮಾರಂಭವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರಾದ ಶ್ರೀಯುತ ಬಿ. ಸಿ. ನಾಗೇಶ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 03.06.2022 ರಂದು ಶಿಕ್ಷಕರ ಸದನ, ಬೆಂಗಳೂರು, ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರಾದ ಶ್ರೀಯುತ ಬಿ. ಸಿ. ನಾಗೇಶ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಸೆಲ್ವಕುಮಾರ್,ಭಾ.ಆ.ಸೇ, ಎನ್.ಇ.ಪಿ ಅನುಷ್ಠಾನ ಕಾರ್ಯಪಡೆ ಅಧ್ಯಕ್ಷರಾದ ಮದನ್ ಗೋಪಾಲ್ ರವರು ಉಪಸ್ಥಿತರಿದ್ದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು - ಡಿ.ಎಸ್.ಇ.ಆರ್.ಟಿ, ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಕರ್ನಾಟಕ ಪಠ್ಯಪುಸ್ತಕ ಸಂಘ ಹಾಗೂ ಸಹನಿರ್ದೇಶಕರು - ಡಿ.ಎಸ್.ಇ.ಆರ್.ಟಿ, ಹಾಗೂ ಸಮಗ್ರ ಶಿಕ್ಷಣ ಕರ್ನಾಟಕ, ಎನ್.ಇ.ಪಿ ಪೊಸಿಷನ್ ಪೇಪರ್ ತಂಡದ ನೋಡಲ್ ಅಧಿಕಾರಿಗಳು, ತಂತ್ರಜ್ಞರು, ಇಲಾಖಾ ಹಾಗೂ ತಾಂತ್ರಿಕ ಸಮನ್ವಯಾಧಿಕಾರಿಗಳು, ಸದಸ್ಯರುಗಳು ಭಾಗವಹಿಸಿದ್ದರು.



ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಡಿ.ಎಸ್.ಇ.ಆರ್.ಟಿ ಕಛೇರಿಯ ಉಪನಿರ್ದೇಶಕರಾದ ಶ್ರೀ ಸಲೀಂ ಪಾಷಾ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ.ಸಿ. ನಾಗೇಶ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರನ್ನು, ಮಾನ್ಯ ಪ್ರಧಾನ ಕಾರ್ಯದರ್ಶಿಗLನ್ನು, ಶ್ರೀ ಮದನ್ ಗೋಪಾಲ್ ರವರನ್ನು, ಪೊಸಿಷನ್ ಪೇಪರ್ ಸಿದ್ವತಾ ಸಮಿತಿಯ ಎಲ್ಲ ಸದಸ್ಯರನ್ನು ಹಾಗೂ  ಸಭೆಗೆ ಆಗಮಿಸಿದ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿ ವೃಂದದವರನ್ನು ಸಭೆಗೆ ಸ್ವಾಗತಿಸಿದರು.




ಮಾನ್ಯ ಶಿಕ್ಷಣ ಸಚಿವರು ಹಾಗೂ ವೇದಿಕೆಯಲ್ಲಿ ಉಪಸ್ಥಿತರಿದ್ದ ಇಲಾಖಾ ಮುಖ್ಯಸ್ಥರುಗಳು ದೀಪ ಬೆಳಗುವದರೊಂದಿಗೆ ಎನ್.ಇ.ಪಿ-2020 ಪೊಸಿಷನ್ ಪೇಪರ್ ಸಿದ್ವತಾ ತಂಡದ ಸಮಿತಿಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸುತ್ತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ರವರು ಮಾತನಾಡುತ್ತಾ, ಎನ್.ಇ.ಪಿ-2020 ಪೊಸಿಷನ್ ಪೇಪರ್ ಸಿದ್ಧತಾ ಕಾರ್ಯಕ್ಕೆ ತೊಡಗಿಸಿಕೊಂಡಿರುವ 26 ಪೊಸಿಷನ್ ಪೇಪರ್ ಸದಸ್ಯರುಗಳು ತಂಡದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸಿದರು. ಪೊಸಿಷನ್ ಪೇಪರ್ ಗಳನ್ನು Mandate Document ಪ್ರಕಾರ ಹಾಗೂ ಭಾರತ ಸರ್ಕಾರ ನೀಡಿರುವ E-Template ಪ್ರಕಾರ ಸಿದ್ಧಗೊಳಿಸಿ ಭಾರತ ಸರ್ಕಾರದ ಪೋರ್ಟಲ್‌ನಲ್ಲಿ ಅಪ್ ಲೋಡ್ ಮಾಡಲು ಕ್ರಮವಹಿಸಲಾಗಿದ್ದು, ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿರುವುದು ಹೆಮ್ಮೆಯ ವಿಷಯವಾಗಿದೆ. ಇದೇ ಮಾದರಿಯಲ್ಲಿ ಈಗಾಗಲೇ ಸಿದ್ಧಗೊಳಿಸಿರುವ ಎನ್.ಸಿ.ಎಫ್ Mandate Document, ಕೆ.ಸಿ.ಎಫ್ ಹಾಗೂ ಪೊಸಿಷನ್ ಪೇಪರ್ ಗಳನ್ನು ಆಧರಿಸಿ ರಾಜ್ಯ ಪಠ್ಯಕ್ರಮ ಚೌಕಟ್ಟು (ಎಸ್.ಸಿ.ಎಫ್) ತಯಾರಿಸಲು ಸಹ ಸಹಕಾರ ನೀಡಬೇಕಾಗಿ ಮತ್ತೊಮ್ಮೆ ಕೃತಜ್ಞತೆ ಸಲ್ಲಿಸುತ್ತಾ ಪ್ರಶಂಸಾ ನುಡಿಯನ್ನು ಸಭೆಗೆ ಅರ್ಪಿಸಿದರು.



ಮಾನ್ಯ ಶಿಕ್ಷಣ ಸಚಿವರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯಪಡೆ ತಂಡದ ಮುಖ್ಯಸ್ಥರು ಎಲ್ಲಾ 26 ಪೊಸಿಷನ್ ಪೇಪರ್‌ಗಳ ತಂಡದ ತಂಡದ ಮುಖ್ಯಸ್ಥರು, ಸದಸ್ಯರು ಹಾಗೂ ಸಮನ್ವಯಾಧಿಕಾರಿಗಳಿಗೆ ಸನ್ಮಾನಿಸಿದರು.



ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ರವರು ಮಾತನಾಡುತ್ತಾ, ಎನ್.ಇ.ಪಿ-2020 ಪೊಸಿಷನ್ ಪೇಪರ್ ಗಳನ್ನು ಯಶಸ್ವಿಯಾಗಿ ಸಿದ್ಧಗೊಳಿಸಿ ಅಪ್‌ಲೋಡ್ ಮಾಡಿರುವ ಕಾರ್ಯವನ್ನು ಶ್ಲಾಘಿಸುತ್ತಾ ಗುಜರಾತಿನಲ್ಲಿ ನಡೆದ ಎರಡು ದಿನಗಳ ಶೈಕ್ಷಣಿಕ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯವನ್ನು ಪ್ರಶಂಸೆಗೊಳಿಸಿರುವುದನ್ನು ಸಭೆಗೆ ಹಂಚಿಕೊಂಡರು. ಇದೇ ಮಾದರಿಯಲ್ಲಿ ಮುಂಬರುವ ದಿನಗಳಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಸಹಕಾರ ನೀಡಬೇಕಾಗಿ ಕರೆ ನೀಡಿದರು.

ಎನ್. ಇ.ಪಿ ಅನುಷ್ಠಾನ ಕಾರ್ಯಪಡೆ ಅಧ್ಯಕ್ಷರಾದ ಡಾ. ಮದನ್‌ಗೋಪಾಲ ರವರು ಮಾತನಾಡುತ್ತಾ, ಈ ಅನುಷ್ಠಾನ ಕಾರ್ಯಪಡೆ 26 ಪೊಸಿಷನ್ ಪೇಪರ್‌ಗಳ ತಂಡದ ರಚನೆ, ತಂಡದಲ್ಲಿರುವ ತಂತ್ರಜ್ಞರುಗಳ ಆಯ್ಕೆ, ತಂಡವಾರು ನಿರ್ವಹಿಸಿದ ಕೆಲಸಗಳು - ಈ ಎಲ್ಲಾ ಪ್ರಕ್ರಿಯೆಯಲ್ಲಿನ ತಮ್ಮ ಅನುಭವವನ್ನು ಹಂಚಿಕೊಂಡರು. ಇಂಥಾ ಎಲ್ಲಾ ಅದ್ಭುತವಾದ ಪ್ರಕ್ರಿಯೆಗಳನ್ನು ಒಳಗೊಂಡಿರುವ ಈ ನೀತಿಯು "ನಮ್ಮ ರಾಷ್ಟ್ರ, ನಮ್ಮ ರಾಜ್ಯ ಹಾಗೂ ಜನರ ನೀತಿಯಾಗಿದೆ" ಎಂಬುದಾಗಿ ಹೆಮ್ಮೆಯ ವಿಚಾರವನ್ನು ಸಭೆಗೆ ವ್ಯಕ್ತಪಡಿಸಿದರು. ಇದೊಂದು ಪ್ರಾರಂಭ ಹಂತವಾಗಿದ್ದು, ಇದೇ ಮಾದರಿಯ ಸಹಕಾರ ರಾಜ್ಯ ಪಠ್ಯಕ್ರಮ ಚೌಕಟ್ಟು (ಎಸ್.ಸಿ.ಎಫ್) ತಯಾರಿಸಲು ನೀಡಬೇಕಾಗಿ ಸರ್ಕಾರದ ಪರವಾಗಿ ಹಾಗೂ ಟಾಸ್ಕ್ ಫೋರ್ಸ್ ಪರವಾಗಿ ಕೋರುತ್ತಾ ಎಲ್ಲಾ ತಂಡಗಳಿಗೆ ಕೃತಜ್ಞತೆ ಅರ್ಪಿಸಿದರು.




ಮಾನ್ಯ ಶಿಕ್ಷಣ ಸಚಿವರು ಮಾತನಾಡುತ್ತಾ ಎನ್.ಇ.ಪಿ-2020 ಪೊಸಿಷನ್ ಪೇಪರ್ ಗಳನ್ನು ಯಶಸ್ವಿಯಾಗಿ ಸಿದ್ಧಗೊಳಿಸಿರುವ ತಮ್ಮೆಲ್ಲರನ್ನು ಸನ್ಮಾನಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಹಾಗೂ ತಮ್ಮೆಲ್ಲರ ಪರಿಶ್ರಮದಿಂದಾಗಿ ಗುಜರಾತಿನಲ್ಲಿ ನಡೆದ ಶೈಕ್ಷಣಿಕ ಸಮ್ಮೇಳನದಲ್ಲಿ ರಾಜ್ಯಕ್ಕೆ ಪ್ರಶಂಸೆ ಬಂದಿರುವುದು ಸಂತಸದ ವಿಷಯವಾಗಿದೆ. 26 ಪೊಸಿಷನ್ ಪೇಪರ್‌ಗಳ ಪ್ರಸ್ತಾಪವಾಯಿತು, ಅದರಲ್ಲೂ Early Education ಸಂಬಂಧ ಸರಸ್ವತಿ ಪೂಜೆ ಒಳಗಾಗಿ ಪಠ್ಯವಸ್ತು ಹಾಗೂ ಪಠ್ಯಪುಸ್ತಕಗಳ ಮುದ್ರಣ ಮತ್ತು ಸರಬರಾಜು ಆಗಬೇಕೆನ್ನುವುದು ಕೇಂದ್ರ ಶಿಕ್ಷಣ ಮಂತ್ರಿಗಳ ಆಶಯವಾಗಿದೆ ಎಂದು ತಿಳಿಸಿದರು. ಇದಕ್ಕೆ ಡಾ. ಕಸ್ತೂರಿ ರಂಗನ್ ಸಮಿತಿಯು ಈ ನಿಟ್ಟಿನಲ್ಲಿ ಸಾಕಷ್ಟು ಕ್ರಮವಹಿಸುತ್ತಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿಯೇ ವಿನೂತನ ಪ್ರಯತ್ನವಾಗಿದ್ದು, ಮುಂದಿನ ದಿನಗಳಲ್ಲಿಯೂ ಸಹ ತಮ್ಮೆಲ್ಲರ ಸಹಕಾರದೊಂದಿಗೆ ಕಾರ್ಯೋನ್ಮುಖರಾಗೋಣ ಎಂದು ಹೇಳುತ್ತಾ ಸಭೆಗೆ ಧನ್ಯವಾದ ಅರ್ಪಿಸಿದರು.




**<u>ವಂದನಾರ್ಪಣೆ</u>**

ಸಮಗ್ರ ಶಿಕ್ಷಣ ಕರ್ನಾಟಕ ಕಛೇರಿಯ ಸಹನಿರ್ದೇಶಕರಾದ ಶ್ರೀ ನಾಗೇಶ್, ರವರು ಅಭಿನಂದನಾ ಸಮಾರಂಭದಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಾ ವಂದನಾರ್ಪಣೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.